# ಕೈ-ಕಾಲುಗಳಲ್ಲಿ ಧರಿಸುವ ಆಭರಣಗಳು

## ಮನೋಗತ

ಪ್ರಭು ಶ್ರೀರಾಮಚಂದ್ರನು ರಾವಣನನ್ನು ವಧಿಸಿ ಸೀತೆಯನ್ನು ಬಂಧಮುಕ್ತಗೊಳಿಸಿದಾಗ, ಸಂನ್ಯಾಸಿನಿಯ ವೇಷವನ್ನು ಧರಿಸಿದ ಸೀತೆಗೆ 'ಸ್ತ್ರೀಯು ವಸ್ತ್ರಾಲಂಕಾರಗಳಿಂದ ಸುಶೋಭಿತಳಾಗಿ ಪತಿಯ ಮುಂದೆ ಹೋಗಬೇಕು' ಎಂದು ತ್ರಿಜಟಾ ಎಂಬ ರಾಕ್ಷಸಿಯು ಉಪದೇಶವನ್ನು ಮಾಡುತ್ತಾಳೆ ! ಯುಗಯಗಗಳಿಂದ ಆಭರಣಗಳು ಸ್ತ್ರೀಧರ್ಮ, ಪಾತಿವ್ರತ್ಯ ಮತ್ತು ಶಾಲೀನತೆ ಇವುಗಳ ಶ್ರೇಷ್ಠತೆಯನ್ನು ತೋರಿಸುತ್ತಿವೆ. ಆಭರಣಗಳಿಂದ ದೈವೀ ತತ್ತ್ವದ ಲಾಭವು ಸಿಗುತ್ತದೆ, ಹಾಗೆಯೇ ಕೆಟ್ಟ ಶಕ್ತಿಗಳ ತೊಂದರೆಗಳಿಂದ ರಕ್ಷಣೆಯೂ ಆಗುತ್ತದೆ. ದುರ್ದೈವದಿಂದ ಇಂದಿನ ಸ್ತ್ರೀಯರಿಗೆ ಆಭರಣಗಳ ಮಹತ್ವವು ತಿಳಿದಿಲ್ಲ ಅಥವಾ ಅವರಿಗೆ ಆಭರಣಗಳೆಂದರೆ 'ಫ್ಯಾಶನ್'ನ ವಸ್ತುಗಳೆಂದು ಅನಿಸುತ್ತಿದೆ. ಗಾಜಿನ ಬಳೆಗಳ ಬದಲು ಪ್ಲಾಸ್ಟಿಕ್‌ನ ಬಳೆಗಳನ್ನು ಧರಿಸುವುದು; ಒಂದು ಕೈಯಲ್ಲಿ ಗಡಿಯಾರ ಮತ್ತು ಇನ್ನೊಂದು ಕೈಯಲ್ಲಿ ಒಂದೇ ಬಳೆಯನ್ನು ಧರಿಸುವುದು; ಬಾಜುಬಂದ (ವಂಕಿ), ಕಾಲುಂಗುರಗಳಂತಹ ಆಭರಣಗಳನ್ನು 'ಓಲ್ಡ್ ಫ್ಯಾಶನ್' ಎಂದು ಉಪಯೋಗಿಸದಿರುವುದು ಮುಂತಾದ ಅಯೋಗ್ಯ ವಿಷಯಗಳು ರೂಢಿಯಾಗುತ್ತಿವೆ. ಪ್ರಸ್ತುತ ಗ್ರಂಥದಲ್ಲಿ ನೀಡಿದ ಆಭರಣಗಳ ಮಹತ್ವ, ಕಾರ್ಯ ಮತ್ತು ಅವುಗಳನ್ನು ಧರಿಸುವುದರ ಹಿಂದಿನ ಸೂಕ್ಷ್ಮ ಸ್ತರದಲ್ಲಿನ ಕಾರಣಮೀಮಾಂಸೆಗಳಿಂದ ಆಭರಣಗಳ ಕಡೆಗೆ ನೋಡುವ ಹೊಸ ಆಧ್ಯಾತ್ಮಿಕ ದೃಷ್ಟಿಯು ಲಭಿಸಬಹುದು.

ಸಾತ್ತ್ವಿಕ ಆಭರಣಗಳು ಲಾಭದಾಯಕವಾಗಿದ್ದರೆ, ತಾಮಸಿಕ ಆಭರಣಗಳು (ಅಸುರೀ) ತೊಂದರೆದಾಯಕವಾಗಿರುತ್ತವೆ. ಈ ಗ್ರಂಥದಲ್ಲಿ ಸನಾತನ ಸಂಸ್ಥೆಯ ಓರ್ವ ಸಾಧಕಿಯು ಮಾಡಿದ ಸಾತ್ತ್ವಿಕ ಮತ್ತು ತಾಮಸಿಕ ಆಭರಣಗಳ ಸೂಕ್ಷ್ಮ-ಜ್ಞಾನದ ಪ್ರಯೋಗವನ್ನು ನೀಡಲಾಗಿದೆ. ಪ್ರಯೋಗದಲ್ಲಿ ಆಭರಣಗಳ ಛಾಯಾಚಿತ್ರ, ಆಭರಣಗಳ ವಿಷಯದಲ್ಲಿ ಸಾಧಕಿಯು ಮಾಡಿದ 'ಸೂಕ್ಷ್ಮಜ್ಞಾನದ ಪರೀಕ್ಷೆ' ಮತ್ತು ಕೊನೆಗೆ ಪ್ರಯೋಗದ ನಿಷ್ಕರ್ಷವನ್ನು ನೀಡಲಾಗಿದೆ. ಈ ಪ್ರಯೋಗವನ್ನು ಮಾಡುವ ಸಾಧಕಿಗೆ ಕೆಟ್ಟ ಶಕ್ತಿಗಳ ತೀವ್ರ ತೊಂದರೆಯಿದೆ, ಆದರೆ ಅವಳಲ್ಲಿರುವ 'ತಳಮಳ' ಮತ್ತು 'ಜಿಜ್ಞಾಸುವೃತ್ತಿ'ಯಿಂದಾಗಿ ಅವಳ ಸೂಕ್ಷ್ಮಜ್ಞಾನದ ಪರೀಕ್ಷೆಯು ಸತ್ಯವಾಗಿವೆ. ಅಧ್ಯಾತ್ಮಶಾಸ್ತ್ರವು ಅನುಭೂತಿಯ ಶಾಸ್ತ್ರವಾಗಿರುವುದರಿಂದ ವಾಚಕರು ಮೊದಲು ಆಭರಣಗಳ ಛಾಯಾಚಿತ್ರಗಳೆಡೆಗೆ ನೋಡಿ ಸೂಕ್ಷ್ಮದಿಂದ ಏನನಿಸುತ್ತದೆ, ಅಂದರೆ ಒಳ್ಳೆಯದೆನಿಸುತ್ತದೆಯೋ ಅಥವಾ ತ್ರಾಸದಾಯಕವೆನಿಸುತ್ತದೆಯೋ ಅಥವಾ ಯಾವುದಾದರೂ ಅನುಭೂತಿಯು ಬರುತ್ತದೆಯೋ ಎಂದು ನೋಡಲು ಪ್ರಯತ್ನಿಸಬೇಕು. ಪ್ರತಿಯೊಬ್ಬರ ಪ್ರಕೃತಿ, ಸೂಕ್ಷ್ಮದ ವಿಷಯವನ್ನು ಅರಿತುಕೊಳ್ಳುವ ಕ್ಷಮತೆ ಮತ್ತು ಸಾಧನೆ ಇವುಗಳಿಗನುಸಾರ ಅವರಿಗೆ ಪ್ರಯೋಗದಲ್ಲಿ ಬೇರೆಬೇರೆ ರೀತಿಯ ಅರಿವಾಗಬಹುದು. ಪ್ರಯೋಗದಿಂದ ಆಭರಣಗಳು ಸಾತ್ತ್ವಿಕವಾಗಿವೆಯೋ ಅಥವಾ ತಾಮಸಿಕವಾಗಿವೆಯೋ ಎಂಬುದನ್ನು ಗುರುತಿಸಲು ಪ್ರಯತ್ನಿಸಬೇಕು. ಅನಂತರ ಪ್ರಯೋಗದ 'ಸೂಕ್ಷ್ಮಜ್ಞಾನದ ಪರೀಕ್ಷೆ'ಯನ್ನು ಓದಬೇಕು. 'ಸೂಕ್ಷ್ಮಜ್ಞಾನದ ಪರೀಕ್ಷೆ'ಯನ್ನು ಓದಿದ ನಂತರ ನಿಷ್ಕರ್ಷವನ್ನು

ಓದುವ ಮೊದಲು ಸ್ವತಃ ಅದರ ಬಗ್ಗೆ ಚಿಂತನ ಮಾಡಬೇಕು ಮತ್ತು ನಂತರವೇ ನಿಷ್ಕರ್ಷವನ್ನು ಓದಬೇಕು. ಇದರಿಂದ ವಾಚಕರಿಗೆ ಸೂಕ್ಷ್ಮದ ಅಧ್ಯಯನವನ್ನು ಮಾಡುವ ಅಭ್ಯಾಸವಾಗಿ ಆಭರಣಗಳನ್ನು ಖರೀದಿಸುವಾಗ ಅವು ಸಾತ್ತ್ವಿಕವಾಗಿವೆಯೋ ತಾಮಸಿಕವಾಗಿವೆಯೋ ಎಂದು ಗುರುತಿಸಲು ಸಹಾಯವಾಗುವುದು.

ಆಭರಣಗಳಿಂದ ಆಧ್ಯಾತ್ಮಿಕ ಲಾಭ ಸಿಗಲು ಎಲ್ಲ ಆಭರಣಗಳನ್ನು ಧರಿಸುವ ಅವಶ್ಯಕತೆಯಿರುವುದಿಲ್ಲ. ಆರ್ಥಿಕ ಪರಿಸ್ಥಿತಿಗನುಸಾರ ಒಂದೆರಡು ಆಭರಣಗಳನ್ನು ಧರಿಸಿದರೂ ಸಾಕಾಗುತ್ತದೆ. ಚಿನ್ನದ ಆಭರಣಗಳಿಗಿಂತ ಬೆಳ್ಳಿಯ ಆಭರಣಗಳು ಕೈಗೆಟುಕುವಂತಿರುತ್ತವೆ. ಆಭರಣಗಳನ್ನು ಧರಿಸುವುದರ ಹಿಂದೆ ಭಾವವು ಹೆಚ್ಚು ಮಹತ್ವದ್ದಾಗಿರುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಈ ಗ್ರಂಥದ ವಾಚನದಿಂದ ಆಭರಣಗಳನ್ನು ಧರಿಸುವುದರ ಮಹತ್ತ್ವವು ಗಮನಕ್ಕೆ ಬಂದು ಆಭರಣಗಳ ಅಮೂಲ್ಯ ಸಂಪತ್ತನ್ನು ನೀಡಿದ ಹಿಂದೂ ಧರ್ಮದ ಶ್ರೇಷ್ಠತನವು ಗಮನಕ್ಕೆ ಬರಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

## ಆಧ್ಯಾತ್ಮಿಕ ದೃಷ್ಟಿಯಿಂದ ಆಭರಣಗಳನ್ನು ಶುದ್ಧೀಕರಿಸುವುದರ ಮಹತ್ತ್ವ

ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಧರಿಸುವುದರಿಂದ ಕೆಟ್ಟ ಶಕ್ತಿಗಳಿಗೆ ದೇಹದ ಆಯಾ ಸ್ಥಳಗಳಿಂದ ಶರೀರದಲ್ಲಿ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಕೆಟ್ಟ ಶಕ್ತಿಗಳು ಆಭರಣಗಳ ಮೇಲೆ ಕಪ್ಪು ಆವರಣವನ್ನು ತರುತ್ತವೆ. ಇದು ಸೂಕ್ಷ್ಮದಲ್ಲಿ ನಡೆಯುವುದರಿಂದ ಸಾಮಾನ್ಯ ಜನರಿಗೆ ಕಾಣಿಸುವುದಿಲ್ಲ ಮತ್ತು ಅವರಿಗೆ 'ಆಭರಣಗಳು ಸ್ವಚ್ಛವಾಗಿವೆ' ಎಂದೆನಿಸುತ್ತದೆ; ಆದರೆ ಪ್ರತ್ಯಕ್ಷದಲ್ಲಿ ಹಾಗಿರುವುದಿಲ್ಲ. ಆದುದರಿಂದ ಆಭರಣಗಳನ್ನು ನಿಯಮಿತವಾಗಿ ಸ್ಥೂಲ ಮತ್ತು ಸೂಕ್ಷ್ಮ ದೃಷ್ಟಿಯಿಂದ ಸ್ವಚ್ಛಗೊಳಿಸುವುದು ಅವಶ್ಯಕವಾಗಿದೆ. ಆಭರಣಗಳನ್ನು ಅಂಟುವಾಳ ಕಾಯಿಯಿಂದ (ಸ್ಥೂಲದಲ್ಲಿ) ಸ್ವಚ್ಛಗೊಳಿಸುವಾಗ ಅವುಗಳ ಮೇಲಿನ ಕಪ್ಪು ಆವರಣವು ದೂರವಾಗಲು ಪ್ರಾರ್ಥನೆಯನ್ನು ಮಾಡಬೇಕು ಮತ್ತು ಅವುಗಳಿಗೆ ವಿಭೂತಿಯನ್ನು ಹಚ್ಚಿ ತೊಳೆಯಬೇಕು. ಕೆಟ್ಟ ಶಕ್ತಿಗಳ ತೊಂದರೆಯಿರುವವರು ವಾರಕೊಮ್ಮೆ ಮತ್ತು ತೊಂದರೆಯಿಲ್ಲದವರು ತಿಂಗಳಿಗೊಮ್ಮೆ ಆಭರಣಗಳನ್ನು ಮೇಲಿನ ಪದ್ಧತಿಯಿಂದ ಸ್ವಚ್ಛಗೊಳಿಸಬೇಕು. **(ಆಧಾರ : ಸನಾತನದ ಗ್ರಂಥ 'ಸ್ತ್ರೀ-ಪುರುಷರ ಆಭರಣಗಳು')**

**ಟಿಪ್ಪಣಿ :** ಗ್ರಂಥದಲ್ಲಿನ ಕೆಲವು ಸೂಕ್ಷ್ಮಜ್ಞಾನದ ಚಿತ್ರಗಳಲ್ಲಿ ತೋರಿಸಿರುವ ವಿವಿಧ ಸ್ಪಂದನಗಳಿಂದಾಗಿ ಅದರ ಮೂಲಚಿತ್ರವು ಸುಸ್ಪಷ್ಟವಾಗಿ ಕಾಣಿಸುವುದಿಲ್ಲ. ಇಂತಹ ಮೂಲಚಿತ್ರಗಳನ್ನು ಸಂಬಂಧಪಟ್ಟ ಸೂಕ್ಷ್ಮಜ್ಞಾನದ ಚಿತ್ರದ ಮೊದಲು ಅಥವಾ ಚಿತ್ರದ ಬದಿಯಲ್ಲಿ ಕೊಡಲಾಗಿದೆ.

## ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು '*' ಈ ಚಿಹ್ನೆಯ ಮೂಲಕ ತೋರಿಸಲಾಗಿದೆ.)


**೧. ತೋಳುಬಂದಿ (ಬಾಜುಬಂದ)** ೨೨

**೨. ಬಳೆಗಳು (ಕಂಕಣಗಳು)** ೨೭

* ಮಹತ್ವ ೨೭

* ಬಳೆಗಳ ವಿಧಗಳು - ಪಾಟ್ಲಿ, ಬಿಲವರ, ತೋಡೆ ಮತ್ತು ಗಾಜಿನ ಬಳೆಗಳು ೨೮

* ಪ್ಲಾಸ್ಟಿಕ್ ಬಳೆಗಳನ್ನು ಏಕೆ ಹಾಕಿಕೊಳ್ಳಬಾರದು ? ೪೫

* ಪ್ಲಾಸ್ಟಿಕ್‌ನ, ಗಾಜಿನ ಮತ್ತು ಚಿನ್ನದ ಬಳೆಗಳನ್ನು ಧರಿಸಿ ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೪೫

* ಕೈಯಲ್ಲಿ ಸೀಳಿದ (ಒಡೆದ) ಬಳೆಗಳನ್ನು ಏಕೆ ಧರಿಸಬಾರದು ? ೪೯

* ಸ್ತ್ರೀಯರ ಎಡಗೈಯಲ್ಲಿ ಗಡಿಯಾರವಿರುವುದರಿಂದ ಕೇವಲ ಬಲಗೈಯಲ್ಲಿ ಬಳೆಗಳನ್ನು ಧರಿಸುವುದು ಏಕೆ ಅಯೋಗ್ಯವಾಗಿದೆ ? ೫೦

* ಕೈಯಲ್ಲಿ ಬಳೆಗಳನ್ನು ಮತ್ತು ಗಡಿಯಾರವನ್ನು ಧರಿಸಿ ಮಾಡಿದ ಸೂಕ್ಷ್ಮ-ಜ್ಞಾನದ ಪ್ರಯೋಗ ೫೦

* ಬಳೆಗಳ ವಿಷಯದಲ್ಲಿ ಕೆಟ್ಟ ಶಕ್ತಿಗಳ ತೊಂದರೆಯಿರುವ ಸಾಧಕಿಯರ ಇಷ್ಟಾನಿಷ್ಟಗಳು ಮತ್ತು ಅನುಭವಗಳು ೫೭

* ಬಳೆಗಳಿಂದ ಆಧ್ಯಾತ್ಮಿಕ ಉಪಚಾರವಾಗುವ ಬಗ್ಗೆ ಬಂದ ಅನುಭೂತಿಗಳು ೬೧

**೩. ಉಂಗುರ** ೬೩

* ಉಂಗುರವನ್ನು ಅನಾಮಿಕಾದಲ್ಲಿ ಏಕೆ ಧರಿಸಬೇಕು ? ೬೪

* ತಾಮಸಿಕ ಉಂಗುರವನ್ನು ಧರಿಸಿದಾಗ ಸಾಧಕಿಗೆ ವಿವಿಧ ರೀತಿಯ ತೊಂದರೆಗಳಾಗುವುದು ೬೭

**೪. ಕಾಲ್ಗೆಜ್ಜೆಗಳು** ೬೮

* ಮಹತ್ವ ಮತ್ತು ಲಾಭಗಳು ೬೮

* ಕಾಲ್ಗೆಜ್ಜೆ, ಕಾಲುಂಗುರ ಮತ್ತು ಮಾಸೋಳಿ (ಮೀನಿನ ಆಕಾರದ ಕಾಲುಂಗುರ) ಇವುಗಳನ್ನು ಬೆಳ್ಳಿಯಿಂದಲೇ ಏಕೆ ತಯಾರಿಸುತ್ತಾರೆ ? ೬೯

* ಕಾಲ್ಗೆಜ್ಜೆಗಳ ಕುರಿತು ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೭೦

* ಕಾಲ್ಗೆಜ್ಜೆಗಳ ಬಗ್ಗೆ ಕೆಲವು ಸಾಧಕರಿಗೆ ಬಂದ ವೈಶಿಷ್ಟ್ಯಪೂರ್ಣ ಅನುಭವಗಳು ಮತ್ತು ಅವುಗಳ ಕಾರಣಗಳು ೭೩

**೫. ಕಾಲುಂಗುರಗಳು** ೭೫

* ಮಹತ್ವ ಮತ್ತು ಲಾಭ ೭೫

* ಕಾಲುಂಗುರಗಳನ್ನು ಧರಿಸಿ ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೭೭

೬. ಮಾಸೋಳಿ (ಮತ್ಸ್ಯಾಕಾರದ ಕಾಲುಂಗುರ) ೭೮

೭. ಮನಸ್ಸಿನಲ್ಲಿ ವಿವಿಧ ಆಭರಣಗಳ ವಿಚಾರ ಬಂದಾಗ ಸಾಧಕಿಗೆ ಅವುಗಳ ಬಗ್ಗೆ ಅರಿವಾದ ಪರಿಣಾಮ ಮತ್ತು ಕಾರ್ಯ ೮೨

೮. ಆಭರಣಕ್ಕೆ ಸಂಬಂಧಿಸಿದ ದೇವತೆ, ದೇವತೆಯ ಕಾರ್ಯನಿರತವಾಗುವ ಭಾವ, ಆಭರಣಗಳನ್ನು ಧರಿಸುವವನ ಮತ್ತು ನೋಡುವವನ ಭಾವ ೮೩

೯. ಆಧ್ಯಾತ್ಮಿಕ ತೊಂದರೆಯಿರುವ ಮತ್ತು ಆಧ್ಯಾತ್ಮಿಕ ತೊಂದರೆಯಿಲ್ಲದಿರುವ ಜೀವಗಳು ಆಭರಣಗಳನ್ನು ಧರಿಸುವುದರಿಂದ ತಾರಕ ಮತ್ತು ಮಾರಕ ಸ್ತರದಲ್ಲಾಗುವ ಲಾಭಗಳು ೮೪

೧೦. ವಿವಿಧ ಆಭರಣಗಳಿಂದ ಜೀವಕ್ಕೆ ಬರುವ ಅನುಭೂತಿಗಳ ಪ್ರಮಾಣ ೮೫

೧೧. ಆಚಾರಧರ್ಮಕ್ಕನುಸಾರ ಆಭರಣಗಳು ಆಯಾಯ ಸ್ಥಳಗಳಲ್ಲಿಯೇ ಧರಿಸುವುದರ ಮಹತ್ವವನ್ನು ವಿಶದೀಕರಿಸುವ ಸೂಕ್ಷ್ಮದಲ್ಲಿನ ಪ್ರಯೋಗ ೮೫

## ಸನಾತನದ ಗ್ರಂಥಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸಲು ಸಹಾಯ ಮಾಡಬೇಕಾಗಿ ವಿನಂತಿ !

ಅಧ್ಯಾತ್ಮದ ಜಿಜ್ಞಾಸುಗಳು, ವಿವಿಧ ಯೋಗಮಾರ್ಗಗಳಿಗನುಸಾರ ಸಾಧನೆ ಮಾಡುವ ಸಾಧಕರು ಮತ್ತು ಧರ್ಮಪ್ರೇಮಿಗಳಿಗೆ ಆಧ್ಯಾತ್ಮಿಕ ಪ್ರಗತಿಗಾಗಿ ಮಾರ್ಗದರ್ಶನವಾಗಬೇಕು ಮತ್ತು ಹಿಂದೂ ರಾಷ್ಟ್ರದ ಸ್ಥಾಪನೆಯಾಗಬೇಕು ಎಂಬುದಕ್ಕಾಗಿ ಸನಾತನವು ಆಚಾರಧರ್ಮ, ಧಾರ್ಮಿಕ ಕೃತಿ, ದೇವತೆಗಳು, ಸಾಧನೆ, ರಾಷ್ಟ್ರರಕ್ಷಣೆ, ಧರ್ಮಜಾಗೃತಿ ಮುಂತಾದ ವಿಷಯಗಳ ಬಗ್ಗೆ ಗ್ರಂಥ ಮತ್ತು ಕಿರುಗ್ರಂಥಗಳನ್ನು ಪ್ರಕಾಶಿಸಿದೆ. ಈ ಗ್ರಂಥಸಂಪತ್ತನ್ನು ಕನ್ನಡ, ಹಿಂದಿ, ಆಂಗ್ಲ, ಗುಜರಾತಿ, ತಮಿಳು, ತೆಲುಗು, ಮಲಯಾಳಮ್, ಬಂಗಾಳಿ, ಒರಿಯಾ, ಗುರುಮುಖಿ (ಪಂಜಾಬಿ), ಅಸ್ಸಾಮಿ, ಸರ್ಬಿಯನ್, ಜರ್ಮನ್ ಮತ್ತು ನೇಪಾಳಿ ಭಾಷೆಗಳಿಗೆ ಅನುವಾದ ಮಾಡುವ ಸೇವೆಯಲ್ಲಿ ಭಾಗಿಯಾಗುವುದೆಂದರೆ ಈ ಧರ್ಮಕಾರ್ಯದ ಸುವರ್ಣಾವಕಾಶವೇ ಆಗಿದೆ. ಸಂಪರ್ಕ ಕ್ರ. : ೯೩೪೧೬೩೫೯೧೭

## ತಾಮಸಿಕ (ಅಸುರೀ) ಚಿತ್ರಗಳ ಸುತ್ತಲೂ ನಾಮಜಪದ ಚೌಕಟ್ಟನ್ನು, ಅಂದರೆ ಮಂಡಲವನ್ನು ಹಾಕುವುದರ ಕಾರಣ

ತ್ರಾಸದಾಯಕ ಶಕ್ತಿಗಳ ಚಿತ್ರಗಳಿಂದಲೂ ಕಪ್ಪು ಶಕ್ತಿಯ ಪ್ರಕ್ಷೇಪಣೆಯಾಗುತ್ತದೆ. ಈ ತ್ರಾಸದಾಯಕ ಶಕ್ತಿಯಿಂದ ವಾಚಕರಿಗೆ ತೊಂದರೆಯಾಗಬಾರದೆಂದು ಸೂಕ್ಷ್ಮದಿಂದ ಆವಶ್ಯಕ ನಾಮಜಪವನ್ನು ಹುಡುಕಿ ಕೆಟ್ಟ ಶಕ್ತಿಯ ಚಿತ್ರದ ಸುತ್ತಲೂ ಆ ನಾಮಜಪದ ಮಂಡಲವನ್ನು ಹಾಕುವುದು ಆವಶ್ಯಕವಾಗಿದೆ. (ಉದಾ. ಪುಟ ೨೫ ರಲ್ಲಿನ ಮಾಂತ್ರಿಕನ ಚಿತ್ರ)